**ಸಿಇಟಿ-2016 – ವೈದ್ಯಕೀಯ / ದಂತವೈದ್ಯಕೀಯ / ಆಯುಷ್ / ಕೃಷಿ / ವೆಟರಿನರಿ – ಸೀಟು ಹಂಚಿಕೆ ಸೂಚನೆಗಳು**

**ಆಯ್ಕೆ ದಾಖಲಿಸುವ ವೇಳಾಪಟ್ಟಿ**

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.22/2015-16 ದಿನಾಂಕ: 21-09-2016

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ದಿನಾಂಕ 21-09-2016 ರ ತಮ್ಮ ಪತ್ರದಲ್ಲಿ Oversight Committee ರವರ ನಿರ್ದೇಶನದಂತೆ ಆರು ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು 225 ವೈದ್ಯಕೀಯ ಸೀಟುಗಳಿಗೆ ಸೀಟ್ ಮ್ಯಾಟ್ರಿಕ್ಸ್ ಅನ್ನು ನೀಡಿ ಆನ್‌ಲೈನ್ ಸೀಟು ಹಂಚಿಕೆಯ ಮೂಲಕ ಹಂಚಿಕೆ ಮಾಡಲು ಪ್ರಾಧಿಕಾರವನ್ನು ಕೋರಿರುತ್ತಾರೆ. ಮುಂದುವರಿದು ಈ ಸೀಟು ಹಂಚಿಕೆ ಸಂಬಂಧ ಒಂದು ಟಿಪ್ಪಣಿಯನ್ನು ಪ್ರಾಧಿಕಾರಕ್ಕೆ ನೀಡಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲು ಸಹ ಕೋರಿರುವ ಹಿನ್ನಲೆಯಲ್ಲಿ ಸದರಿ ಟಿಪ್ಪಣಿಯನ್ನು ಯಥಾವತ್ತಾಗಿ ಈ ಕೆಳಗೆ ನೀಡಲಾಗಿದೆ.

NOTE:

1. All the students seeking admissions in below mentioned colleges should refer the public notice letter of oversight committee in the website www.mohfw.gov.in for information.
2. Since approval to the below mentioned colleges are subject to compliance of conditions imposed by oversight committee the students admitted to the below mentioned colleges shall not claim any equity if the approval to the below mentioned colleges stayed / cancelled / disputed.

   The students shall file an affidavit undertaking that students should not claim an equity if any disputes arise out of approval / admissions.

The list of colleges:

a. Shridevi Institute of Medical Sciences & Research Hospital, Tumkur - 60 seats
b. Al-Ameen Medical College, Bijapur (add) – 13 seats
c. Akash Institute of Medical Sciences & Research Centre, Devanahalli, Bangalore -38 seats
d. Kanachur Medical Sciences, Derlakatte, Mangalore – 38 seats
e. Oxford Medical College, Hospital and Research Centre, Bangalore – 38 seats
f. Sapthagiri Institute of Medical Sciences & Research Centre, Bangalore. -38 seats

ಈ ಮೇಲ್ಕಂಡ 225 ವೈದ್ಯಕೀಯ ಸೀಟುಗಳ ಜೊತೆಯಲ್ಲಿ, ರದ್ದುಪಡಿಸಿಕೊಂಡಿರುವ / ಹೊಸದಾಗಿ ಸೇರ್ಪಡೆಯಾದ / ಕಾಲೇಜಿಗೆ ಪ್ರವೇಶ ಪಡೆಯದೆ ಇರುವ (if any) ವೈದ್ಯಕೀಯ, ದಂತವೈದ್ಯಕೀಯ, ಆಯುಷ್, ಕೃಷಿ ವಿಜ್ಞಾನ, ವೆಟರಿನರಿ ಸೀಟುಗಳು ಸೀಟುಗಳನ್ನು 2016ನೇ ಸಾಲಿನಲ್ಲಿ ರ್‍ಯಾಂಕ್ ಪಡೆದಿರುವ ಅಭ್ಯರ್ಥಿಗಳಿಗೆ ಈ ಸುತ್ತಿನಲ್ಲಿ ಈ ಕೆಳಕಂಡ ವೇಳಾಪಟ್ಟಿಯಂತೆ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. ಕಾಲೇಜುವಾರು, ಕೋರ್ಸುವಾರು ಮತ್ತು ಕ್ಯಾಟಗರಿವಾರು ವಿವರಗಳುಳ್ಳ ಸೀಟ್ ಮ್ಯಾಟ್ರಿಕ್ಸ್ ಅನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಶುಲ್ಕದ ವಿವರಗಳೊಂದಿಗೆ ಪ್ರಕಟಿಸಲಾಗಿದೆ. ಈ ಮೇಲೆ ತಿಳಿಸಿರುವ ಸೀಟುಗಳ ಜೊತೆಯಲ್ಲಿ ಸೀಟು ಹಂಚಿಕೆಯ ಸಂದರ್ಭ ದಲ್ಲಿ ಆಗಿಂದಾಗ್ಗೆ ಉದ್ಭವಿಸುವ ವೈದ್ಯಕೀಯ, ದಂತವೈದ್ಯಕೀಯ, ಆಯುಷ್, ಕೃಷಿ ವಿಜ್ಞಾನ ಮತ್ತು ವೆಟರಿನರಿ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು. ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಕೆಳಗಿನ ವೇಳಾಪಟ್ಟಿಯಂತೆ ಹೊಸದಾಗಿ ಇಚ್ಛೆ / ಆಯ್ಕೆಯನ್ನು ದಾಖಲಿಸಿ ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ. (ಈ ಸುತ್ತಿನಲ್ಲಿ ಇಂಜಿನಿಯರಿಂಗ್, ಆರ್ಕಿಟೆಕ್ಚರ್ ಮತ್ತು ಫಾರ್ಮ ಸೀಟುಗಳನ್ನು ಹಂಚಿಕೆ ಮಾಡುವುದಿಲ್ಲ)

| ಕ್ರ. ಸಂ. | ವಿವರಗಳು | ದಿನಾಂಕ ಮತ್ತು ಸಮಯ |
|---|---|---|
| 01 | ಸೀಟ್ ಮ್ಯಾಟ್ರಿಕ್ಸ್ ಪ್ರಚುರ ಪಡಿಸುವ ದಿನಾಂಕ | 21-09-2016 ರಂದು ಮ.4.00 ರ ನಂತರ |
| 02 | ಅರ್ಹ ಅಭ್ಯರ್ಥಿಗಳಿಂದ ಇಚ್ಛೆ / ಆಯ್ಕೆ ದಾಖಲಿಸಲು (ಬ್ರೋಚರ್ ನಲ್ಲಿ ನೀಡಿರುವ ವಿವರಗಳನ್ನು ಓದಿಕೊಳ್ಳಿ) | 22-09-2016 ರಂದು ಸಂ. 6.00 ರಿಂದ 24-09-2016 ರ ಮ.2.00 ರ ವರೆಗೆ |
| 03 | ಸೀಟು ಹಂಚಿಕೆ ಫಲಿತಾಂಶ | 24-09-2016 ರಂದು ರಾತ್ರಿ.8.00 ರ ನಂತರ |
| 04 | ಸೀಟು ಹಂಚಿಕೆಯ ಬಗ್ಗೆ ದೃಢೀಕರಣ, ಶುಲ್ಕ ಪಾವತಿ ಮತ್ತು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು | 26-09-2016 ರಿಂದ 27-09-2016 |
| 05 | ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 27-09-2016 ಸಂ.5.30 ರೊಳಗಾಗಿ |

**ಸೂಚನೆ:**

1. ಸೀಟನ್ನು ಆಯ್ಕೆ ಮಾಡಿಕೊಂಡವರು, ಸೀಟನ್ನು ಆಯ್ಕೆ ಮಾಡಿಕೊಳ್ಳದವರು, ಸೀಟು ಆಯ್ಕೆ ಮಾಡಿ ಕಾಲೇಜಿಗೆ ಪ್ರವೇಶ ಪಡೆದವರು, ಸೀಟನ್ನು ರದ್ದುಪಡಿಸಿಕೊಂಡವರು (ವೈದ್ಯಕೀಯ ಸೀಟನ್ನು ತೆಗೆದುಕೊಂಡು ರದ್ದುಪಡಿಸಿಕೊಂಡವರನ್ನು ಹೊರತು ಪಡಿಸಿ) ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.
2. ಈ ಸುತ್ತಿನಲ್ಲಿ ಅಭ್ಯರ್ಥಿಗಳು ಫಾರ್ಮ್ ಕೋರ್ಸುಗಳಿಗೆ ಹೊಸದಾಗಿ ಇಚ್ಛೆ / ಆಯ್ಕೆ ಅನ್ನು ದಾಖಲಿಸಬೇಕು.
3. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆ ಇಲ್ಲದಿದ್ದರೂ ಸಹ ಅಭ್ಯರ್ಥಿಗಳು ಆದ್ಯತೆಗಳನ್ನು ಸೇರಿಸಬಹುದು ಯಾಕೆಂದರೆ ಸೀಟು ಹಂಚಿಕೆಯ ಕಾರ್ಯದಲ್ಲಿ ಉದ್ಭವಿಸುವ ವೈದ್ಯಕೀಯ / ದಂತವೈದ್ಯಕೀಯ / ಆಯುಷ್ / ಕೃಷಿ ವಿಜ್ಞಾನ / ವೆಟರಿನರಿ ಕೋರ್ಸುಗಳ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು.
4. ಈಗಾಗಲೇ ಸೀಟನ್ನು ಪಡೆದು ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳೂ ಸಹ ಈ ಸುತ್ತಿನಲ್ಲಿ ಭಾಗವಹಿಸಬಹುದು.
5. ಈಗಾಗಲೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು, ಈ ಮೇಲ್ಕಂಡ ಕೋರ್ಸುಗಳಿಗೆ ಆಸಕ್ತಿ ಇದ್ದರೆ ಮಾತ್ರ ಮತ್ತು ನಿಗದಿತ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ತಾವು ಅಭ್ಯಸಿಸುತ್ತಿರುವ ಕಾಲೇಜುಗಳಿಂದ ಪಡೆಯುವುದನ್ನು ಖಾತ್ರಿಪಡಿಸಿಕೊಂಡು ಈ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ತಕ್ಷಣ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟು ತನ್ನಷ್ಟಕ್ಕೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಆ ಸೀಟುಗಳನ್ನು ಹಿಂಪಡೆಯಲು ಸಾಧ್ಯವಾಗುವುದಿಲ್ಲ ಹಾಗೂ ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶವನ್ನು ಪಡೆಯಬೇಕು.
6. ಆದರೆ ಪ್ರವೇಶ ಪಡೆದಿರುವ ಕಾಲೇಜುಗಳಿಂದ ಮೂಲ ದಾಖಲೆಗಳನ್ನು ಪಡೆದು ಹೊಸದಾಗಿ ಹಂಚಿಕೆಯಾಗುವ ಕಾಲೇಜುಗಳಿಗೆ ನಿಗದಿತ ಸಮಯದಲ್ಲಿ ನೀಡಿ ಪ್ರವೇಶ ಪಡೆಯುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
7. ***ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಯನ್ನು ಪರಿಗಣಿಸಿ ಸೀಟು ಹಂಚಿಕೆಯಾಗುವುದರಿಂದ ಯಾವುದೇ ಕಾರಣಕ್ಕೂ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟನ್ನು ಹಿಂಪಡೆಯಲಾಗುವುದಿಲ್ಲ.***
8. ಸಿಇಟಿ-2016 ರ ಬ್ರೋಚರನಲ್ಲಿ ನೀಡಿರುವ ಇತರೆ ಮಾರ್ಗದರ್ಶನಗಳು ಮತ್ತು ಕಾರ್ಯವಿಧಾನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ವಿಶೇಷ ಸೂಚನೆ:** ಈಗಾಗಲೆ ಸೀಟನ್ನು ಪಡೆದು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಭಾಗವಹಿಸುವ ಮೊದಲು ಪೋಷಕರೊಡನೆ ಚರ್ಚಿಸಿ ಯೋಚಿಸಿ **ವೈದ್ಯಕೀಯ / ದಂತವೈದ್ಯಕೀಯ / ಆಯುಷ್ / ಕೃಷಿ ವಿಜ್ಞಾನ / ವೆಟರಿನರಿ** ಕೋರ್ಸುಗಳಲ್ಲಿ ಇಷ್ಟವಿದ್ದಲ್ಲಿ ಮಾತ್ರ ಭಾಗವಹಿಸಲು ಕೋರಿದೆ. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ, ಮೊದಲು ಪ್ರವೇಶ ಪಡೆದಿದ್ದ ಕಾಲೇಜಿನ ಸೀಟು ತಂತಾನೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಕಾಲೇಜಿನಲ್ಲಿ **ಮುಂದುವರಿಯಲು ಸಾಧ್ಯವಾಗುವುದಿಲ್ಲ** ಅಂತಹ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶವನ್ನು ಪಡೆಯಲೇಬೇಕು. ಒಂದು ವೇಳೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯದಿದ್ದಲ್ಲಿ ಅಭ್ಯರ್ಥಿಯು ಎರಡೂ ಕಡೆ ಸೀಟು ಕಳೆದು ಕೊಳ್ಳುತ್ತಾನೆ ಯಾವುದೇ ಸೀಟನ್ನು ಹೊಂದಿರುವುದಿಲ್ಲ ಹಾಗು ಯಾವುದೇ ಫೀ ಮರು ಪಾವತಿ ಮಾಡುವುದಿಲ್ಲ. ಈ ಸುತ್ತಿನಲ್ಲಿ ಹಂಚಿಕೆಯಾದ ನಂತರ ಕಡ್ಡಾಯವಾಗಿ ಕಾಲೇಜಿಗೆ ಪ್ರವೇಶ ಪಡೆಯಬೇಕು.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು